ಮತ್ತೆ ಮಾಗಡಿ ತಾಲ್ಲೂಕಿನಲ್ಲಿ ಕಣ್ವಾ ಜಲಾಶಯ ಇದ್ದರೂ ಅದು ರಾಮನಗರಕ್ಕೆ ಅನುಕೂಲವಾಗಿದೆ ನೀರಾವರಿ ಸೌಲಭ್ಯವೂ ಕೂಡ ಅಲ್ಲಿಗೆ ಜೊರಕಿದೆ. ಇನ್ನು ಮಂಚನಬೆಲೆ ನೀರಾವರಿಯಿಂದ ರಾಮನಗರ, ಚೆನ್ನಪಟ್ಟಣ ಮತ್ತು ಕನಕಪುರ ತಾಲ್ಲೂಕುಗಳಿಗೆ ನೀರಾವರಿ ಸೌಲಭ್ಯ ಸಿಕ್ಕುತ್ತದೆಯೇ ವಿನಃ ಮಾಗಡಿ ತಾಲ್ಲೂಕಿಗೆ ಯಾವ ಸೌಲಭ್ಯವೂ ಸಿಕ್ಕುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಮೂರು ಜಲಾಶಯಗಳು ಇದ್ದರೂ ಕೂಡ ನಮ್ಮ ತಾಲ್ಲೂಕಿಗೆ ಒಂದು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಸಿಕ್ಕುತ್ತಿಲ್ಲ. ಇಲ್ಲಿಯವರೆಗೆ ನಮ್ಮ ತಾಲ್ಲೂಕಿನ ಬಗ್ಗೆ ಸರ್ಕಾರ ಗಮನ ಹರಿಸಿಲ್ಲ ಎಂದು ಹೇಳಿ ಇದರ ಬಗ್ಗೆ ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಒಂದೆರಡು ಮಾತುಗಳನ್ನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ —ನನಗೆ ಕೇವಲ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು —ದಯಮಾಡಿ ಕುಳಿತುಕೊಳ್ಳಿ. ಒಂದು ನಿಮಿಷದಲ್ಲಿ ತಾವು ಏನೂ ಮಾತನಾಡುವುದಕ್ಕೆ ಬರುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಇಲ್ಲ ಒಂದು ನಿಮಿಷದಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈಗ ನಾನು ಭಾಷಣ ಮಾಡುವುದನ್ನು ಪೂರ್ಣ ಬದಲಾಯಿಸಿ ಕೊಂಡಿದ್ದೇನೆ ಕೇವಲ ಒಂದೇ ಒಂದು ನಿಮಿಷ ಕೊಡಿ ಮುಗಿಸುತ್ತೇನೆ.

ಉಪಾಧ್ಯಕ್ಷರು.—ದಯಮಾಡಿ ಒಂದು ನಿಮಿಷದಲ್ಲಿ ಮುಗಿಸಬೇಕು ನಾನು ಬೆಲ್ಲು ಮಾಡಿದ ತಕ್ಷಣ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಆಡಳಿತ ನೀತಿಗೆ ಧಿಕ್ಕಾರ, ಅನ್ನ ಕೊಡಿ ಎಂದು ಅನ್ನ ಕೇಳಿದ ಜನರ ಮೇಲೆ ಗೋಳಿಬಾರ ಮಾಡುವ ಸರ್ಕಾರಕ್ಕೆ ಧಿಕ್ಕಾರ, ಆಹಾರಧಾನ್ಯದ ಸಗಟು ವ್ಯಾಪಾರವನ್ನು ವಹಿಸಿ ಕೊಳ್ಳತಕ್ಕಂಥ ನೀತಿಗೆ ಧಿಕ್ಕಾರ ***

Mr. DDPUTY SPEAKER.—Dont record.

(The Hon. Member Sri Vatal Nagaraj sat in Aisle).

Mr. DDPUTY SPEAKER.—I want the Hon. Member to help me. He may please go and sitis his seat.

ಶ್ರೀ ವಾಟಾಳ್ ನಾಗರಾಜ್ —ನಾವು ಏನು ಮಾಡೋಣ ಇಲ್ಲಿ ಹೇಳಿ ಸ್ವಾಮಿ ನಾವು ಏತಕ್ಕೋಸ್ಕರ ಇಲ್ಲಿ ಬಂದಿದ್ದೇವೆ ನಾವು ದನಕಾಯುವುದಕ್ಕೆ ಬಂದಿದ್ದೆವೆಯೇ? ಇಡೀ ದೇಶದಲ್ಲಿ ಆಹಾರ ಸಮಸ್ಯೆ ಬೃಹದಾಕಾರವಾಗಿರುವ ಪರಿಸ್ಥಿತಿ ಇರುವಾಗ

***Not recorded as ordered by the chair.